# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 416 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್‌ಸಿಂಹ ನಾಯಕ್ ಕೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯಾದ್ಯಂತ ಪರವಾನಗಿ ಭೂಮಾಪಕರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಪರವಾನಗಿ ಭೂಮಾಪಕರ ಬೇಡಿಕೆಗಳು ಮತ್ತು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿರುತ್ತವೆ:<br><br>1) ಮುಷ್ಕರದ ಅವಧಿಯಲ್ಲಿ ಪರವಾನಗಿ ಭೂಮಾಪಕರ ಲಾಗಿನ್ Temporary ಮತ್ತು Permanent Inactive ಆಗಿದ್ದನ್ನು ತೆಗೆದು Activate ಮಾಡಲು ಕೋರಿದ್ದು, ದಿನಾಂಕ:17-06-2025 ರಿಂದ 11-07-2025 ರವರೆಗೆ Permanent Inactive ಆದ ಪರವಾನಗಿ ಭೂಮಾಪಕರ Flag ಅನ್ನು ತೆಗೆಯಲಾಗಿರುತ್ತದೆ ಹಾಗೂ ಸದರಿ ಅವಧಿಯಲ್ಲಿ Temporary Inactive ಆದ ಪರವಾನಗಿ ಭೂಮಾಪಕರ ಕಡತ ಅಪ್‌ಲೋಡ್ ಅವಧಿಯನ್ನು 1 ತಿಂಗಳಿಗೆ ವಿಸ್ತರಿಸಲಾಗಿರುತ್ತದೆ.<br><br>2) ದರಖಾಸ್ತು ಪೋಡಿಗೆ ಪ್ರತಿ ಬ್ಲಾಕಿಗೆ 1200/- ರೂ. ಸೇವಾ ಶುಲ್ಕ ನೀಡಲು ಕೋರಿದ್ದು, ಪ್ರಸ್ತುತ ಪರಿಶೀಲಿಸಲಾಗುತ್ತಿದೆ.<br><br>ಹಂಚಿಕೆಯಾಗುವ ಎಲ್ಲ ಕೆಲಸಗಳನ್ನು ಆನ್‌ಲೈನ್ ಮೂಲಕ ಹಂಚಿಕೆ ಮಾಡಲು ಕೋರಿದ್ದು, ಈಗಾಗಲೇ ದರಖಾಸ್ತು, 11ಇ, ತತ್ಕಾಲ್ ಪೋಡಿ, ಅಲಿನೇಷನ್, ಹದ್ದುಬಸ್ತು, ಪ್ರಕರಣಗಳು online ಮೂಲಕ ಹಂಚಿಕೆಯಾಗುತ್ತಿದ್ದು, ಸ್ವಾಮಿತ್ವ, ನಕ್ಷಾ, ಕೆರೆ ಮತ್ತು Forest ಅಳತೆಗೆ ತಂತ್ರಾಂಶ ಅಭಿವೃದ್ಧಿ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>3) FIFO system ಬದಲಿಸಲು ಕೋರಿದ್ದು, ಕೆಲವು ಸಂದರ್ಭ ಗಳಲ್ಲಿ ನಿಗಧಿತ ಅವಧಿಯ ಅಳತೆ ಮಾಡಲು ಸಾಧ್ಯವಾಗದ ಕಾರಣ ಹೊಸ ನಿರ್ವಹಣೆಗಾಗಿ ಹೊಸ FIFO System ಗೆ ತಂತ್ರಾಂಶ ಅಭಿವೃದ್ಧಿ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>4) ಅರ್ಜಿ ಅಪ್ಲೋಡ್ ಮಾಡಿದ ತಕ್ಷಣ ಸೇವಾ ಶುಲ್ಕ ನೀಡುವುದು ಸಾಧ್ಯವಿಲ್ಲದ ಕಾರಣ ತಪಾಸಕರ ಅನುಮೋದನೆಯಾದ ತಕ್ಷಣ ಖಾತೆಗೆ ಜಮಾ ಮಾಡಲು ಹಾಗೂ ವಿಲೆ ಪ್ರಕರಣಗಳಿಗೆ ಹಣ ನೀಡಲು ಕೋರಿದ್ದು, |
| (ಆ) | ಬಂದಿದ್ದಲ್ಲಿ, ಪರವಾನಗಿ ಭೂಮಾಪಕರ ನ್ಯಾಯಯುತ ಬೇಡಿಕೆಗಳ ಈಡೇರಿಕೆ ಕುರಿತು ಸರ್ಕಾರದ ನಿಲುವೇನು; | |

| | | |
|---|---|---|
| (ಇ) | ಯಾವ ಕಾಲಮಿತಿಯೊಳಗೆ ಸರ್ಕಾರವು ಇವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಅಗತ್ಯ ಕ್ರಮ ವಹಿಸುವುದು: | ಪರವಾನಗಿ ಭೂಮಾಪಕರು ಕಡತ ಅಪ್ ಲೋಡ್ ಮಾಡಿದ ನಂತರ 30%, ಭೂದಾಖಲೆಗಳ ಸಹಾಯಕ ನಿರ್ದೇಶಕರ ಅಂತಿಮ ಅನುಮೋದನೆಯಾಗಿ ನಕ್ಷೆ ವಿತರಣೆಯಾದ ನಂತರ 70%, ತಕರಾರು ಪ್ರಕರಣಗಳಿಗೆ 30% ಮಾಹೆಯಾನ ಸೇವಾ ಶುಲ್ಕವನ್ನು ಪಾವತಿಸಲಾಗುತ್ತಿದೆ.<br><br>5) ಮೋಜಿಣಿ ಅರ್ಜಿಗಳಿಗೆ ನೀಡುತ್ತಿರುವ ಸೇವಾ ಶುಲ್ಕವನ್ನು 2500/-ರೂ.ಗಳಿಗೆ ಹೆಚ್ಚಿಸಲು ಕೋರಿದ್ದು, ಈ ಹಿಂದೆ ಪರವಾನಗಿ ಭೂಮಾಪಕರಿಗೆ ಪ್ರತಿ ಬ್ಲಾಕ್ ಗೆ ರೂ.800/- ಮತ್ತು ಹೆಚ್ಚುವರಿ ಬ್ಲಾಕ್ ಗೆ 150/- ರಂತೆ ಪಾವತಿಸುತ್ತಿದ್ದು 2022 ರಲ್ಲಿ ಸೇವಾ ಶುಲ್ಕವನ್ನು ಪರಿಷ್ಕರಿಸಿ ಪ್ರತಿ ಬ್ಲಾಕ್ ಗೆ ರೂ.1200/- ರಂತೆ ಮತ್ತು ಹೆಚ್ಚುವರಿ ಬ್ಲಾಕ್ ಗೆ 200/- ರಂತೆ ಆದೇಶಿಸಲಾಗಿರುತ್ತದೆ. ಸರ್ಕಾರದ ಅನುದಾನದಿಂದ ಇವರಿಗೆ ವೇತನ ಪಾವತಿಸದೇ ಅರ್ಜಿದಾರರಿಂದ ಸ್ವೀಕೃತವಾಗುವ ಶುಲ್ಕದಲ್ಲಿ ಕಾಲಕಾಲಕ್ಕೆ ನಿಗದಿಪಡಿಸಿದ ಮೊತ್ತವನ್ನು ಪಾವತಿಸಲಾಗುತ್ತಿದ್ದು ಪರವಾನಗಿ ಭೂಮಾಪಕರಿಗೆ ಸಂಭಾವನೆ ಶುಲ್ಕವನ್ನು ಹೆಚ್ಚಿಸಬೇಕೆಂದರೆ ಪ್ರಸ್ತುತ ಸಾರ್ವಜನಿಕರಿಂದ ಸ್ವೀಕೃತವಾಗುವ ಅರ್ಜಿ ಶುಲ್ಕವನ್ನೂ ಸಹ ಹೆಚ್ಚಿಸಬೇಕಿರುವದರಿಂದ ಪರಿಶೀಲಿಸಲಾಗುತ್ತಿದೆ.<br><br>6) ಕೆಲವು ಸರ್ಕಾರಿ ಯೋಜನೆಗಳಲ್ಲಿ ಪರವಾನಗಿ ಭೂಮಾಪಕರನ್ನು ಅಂತರ್ ಜಿಲ್ಲೆಗೆ ನಿಯೋಜಿಸುವುದನ್ನು ಕೈಬಿಡಲು ಮತ್ತು ಸತತ 6 ತಿಂಗಳು ಗೈರುಹಾಜರಾದವರಿಗೆ **Skill Test** ನೀಡುವ ಬದಲು 1 ವರ್ಷಕ್ಕೆ ಬದಲಾಯಿಸಲು ಕೋರಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.<br><br>7) ತಮ್ಮ ಸೇವೆಯನ್ನು "ಒಂದು ಬಾರಿಯ ವಿಶೇಷ ನೇಮಕಾತಿ" ಅಡಿಯಲ್ಲಿ ಸರ್ಕಾರಿ ಸೇವೆಯಲ್ಲಿ ಕ್ರಮಬದ್ಧಗೊಳಿಸಲು, 2ನೇ ದರ್ಜೆ ಸರ್ಕಾರಿ ಭೂಮಾಪಕರ ವೇತನಕ್ಕೆ ಸರಿಸಮಾನ ವೇತನ ನೀಡಲು ಹಾಗೂ ಕಡತ ಮತ್ತು ಬ್ಲಾಕ್ ರೀತಿಯ ಸೇವಾ ಶುಲ್ಕ ನಿಲ್ಲಿಸಿ ಕನಿಷ್ಠ ವೇತನ ನೀಡಲು ಕೋರಿದ್ದು, ಈ ಕೆಳಗೆ ವಿವರಿಸಿದೆ:-<br><br>ದಿನಾಂಕ:11-03-2010 ರಂದು ಶ್ರೀ ಜಿ.ಕರುಣಾಕರ ರೆಡ್ಡಿ ಕಂದಾಯ ಸಚಿವರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳು ಮತ್ತು ಸಿಬ್ಬಂದಿ(ಪಭೂ) /ಇತರೆ.142/ 2012-2013, ದಿನಾಂ:11-03-2013 ರನ್ವಯ ಸೇವಾ ಭದ್ರತೆಯನ್ನು ಒದಗಿಸಲು ಅಥವಾ ಸೇವೆಯನ್ನು ಸರ್ಕಾರಿ ಕೆಲಸಕ್ಕೆ ಸಕ್ರಮಗೊಳಿಸಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ತಿಳಿಸಲಾಗಿರುತ್ತದೆ. ಇದಲ್ಲದೇ ಪರವಾನಗಿ ಭೂಮಾಪಕರು ಖಾಲಿ ಇರುವ ಮಂಜೂರಾದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿರುವುದಿಲ್ಲವಾದ್ದರಿಂದ ಇವರುಗಳಿಗೆ ಸೇವೆಯಲ್ಲಿ ಸಕ್ರಮಗೊಳಿಸುವುದು |

| | | |
|---|---|---|
| | | ವಯೋಮಿತಿ ಸಡಿಲಿಕೆ, ಸೇವಾ ಭದ್ರತೆ ನೀಡುವುದು, ಕನಿಷ್ಠ ವೇತನ ನಿಗದಿಪಡಿಸುವುದಕ್ಕಾಗಲೀ ಅವಕಾಶವಿಲ್ಲವೆಂದು ಹಾಗೂ ಮಾನ್ಯ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿರ್ಧರಿಸಿರುವ ಆದೇಶಗಳನ್ನು ಪ್ರಸ್ತಾಪಿಸಿ ಈ ವಿಷಯವು ಈಗಾಗಲೇ ಅತಿ ಸ್ಪಷ್ಟವಾಗಿದ್ದು ಇದಕ್ಕೆ ವ್ಯತಿರಿಕ್ತವಾಗಿ ನಡೆಯಲು ಸಾಧ್ಯವಿರುವುದಿಲ್ಲ" ಎಂದು ತಿಳಿಸಲಾಗಿರುತ್ತದೆ.<br><br>ಪರವಾನಗಿ ಭೂಮಾಪಕರು ತಮ್ಮನ್ನು ಖಾಯಂಗೊಳಿಸುವ ಕುರಿತು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದಂತೆ ಮಾನ್ಯ ಅಡ್ವೊಕೇಟ್ ಜನರಲ್ ರವರ ಪರವಾನಗಿ ಭೂಮಾಪಕರು ಸರ್ಕಾರಿ ಭೂಮಾಪಕರು ಅಲ್ಲವೆಂದು ಹಾಗೂ ಸರ್ಕಾರದಿಂದ ಈ ಬಗ್ಗೆ ಭರವಸೆ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪರವಾನಗಿ ಭೂಮಾಪಕರು/ad-hoc ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವುದಿಲ್ಲವೆಂದು ಹಾಗೂ ಇವರಿಗೆ ಸೇವಾ ನಿಯಮಗಳು ಅನ್ವಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಇವರುಗಳನ್ನು ನೇಮಕಾತಿಗೆ ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೇ KAT ಪ್ರಕರಣ ದಾಖಲಿಸಿದ್ದು ಘನ ನ್ಯಾಯಾಲಯವು ಪ್ರಕರಣವನ್ನು ವಜಾಗೊಳಿಸಿ ಆದೇಶಿಸಿರುತ್ತದೆ.<br><br>ಘನ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ತಮಗೆ ಸೇವಾ ಭದ್ರತೆ ನೀಡಲು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಹಾಗೂ ತಮ್ಮನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಪ್ರಕರಣ ದಾಖಲಿಸಿದ್ದು ನ್ಯಾಯಾಲಯವು ದಿನಾಂಕ: 09-06-2023 ರಂದು ಅಂತಿಮ ಆದೇಶವನ್ನು ಹೊರಡಿಸಿದಂತೆ, ಸರ್ಕಾರದಿಂದ ನಿರ್ದೇಶನ ಪಡೆದು "ಪರವಾನಗಿ ಭೂಮಾಪಕರನ್ನು ಭೂಮಾಪನ ಇಲಾಖೆಯಲ್ಲಿ ವಿಲೀನಗೊಳಿಸುವ ಕುರಿತಂತೆ ಭೂಮಾಪನ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು 10 ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿ ಸರ್ಕಾರದಿಂದ ವೇತನ ಭತ್ಯೆಗಳನ್ನು ಪಡೆದಿದ್ದಲ್ಲಿ ಮಾತ್ರ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುತ್ತದೆ. ಆದರೆ ಪರವಾನಗಿ ಭೂಮಾಪಕರನ್ನು ಯಾವುದೇ ಖಾಲಿ ಹುದ್ದೆಗೆ ನೇಮಕ ಮಾಡಿಕೊಂಡಿರುವುದಿಲ್ಲ. ಸಂಚಿತ ನಿಧಿ ಯಿಂದಾಗಲಿ, ಸರ್ಕಾರದ ಅನುದಾನದಿಂದಾಗಲಿ ಇವರಿಗೆ ವೇತನ ಪಾವತಿಸಿರುವುದಿಲ್ಲ. ಅರ್ಜಿದಾರರಿಂದ ಸ್ವೀಕೃತವಾಗುವ ಶುಲ್ಕದಲ್ಲಿ ಕಾಲಕಾಲಕ್ಕೆ ನಿಗಧಿಪಡಿಸಿದ ಮೊತ್ತವನ್ನು ಪಾವತಿಸ ಲಾಗುತ್ತಿದೆ. ಹಾಗೂ ಪರವಾನಗಿ ನೀಡುವಾಗ ಇದು ಯಾವುದೇ ಸರ್ಕಾರಿ ಸೇವೆಗೆ ಪೂರಕವಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಅಲ್ಲದೆ ಶ್ರೀಮತಿ ಉಮಾದೇವಿ ಪ್ರಕರಣದನ್ವಯ ಪರವಾನಗಿ |

| | | |
|---|---|---|
| | | ವಿರುವುದಿಲ್ಲವೆಂದು ಸ್ಪಷ್ಟಪಡಿಸಿ ಹಿಂಬರಹ ನೀಡಲಾಗಿರುತ್ತದೆ.<br><br>ರಾಜ್ಯಾದ್ಯಂತ ಪರವಾನಗಿ ಭೂಮಾಪಕರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ದಿನಾಂಕ:26-06-2025 ರಿಂದ 09-07-2025 ರವರೆಗೆ ಮುಷ್ಕರವನ್ನು ನಡೆಸಿದ್ದು, ಸದರಿಯವರ ಬೇಡಿಕೆಗಳ ಕುರಿತು ಆಯುಕ್ತರು, ಭೂಮಾಪನ ಇಲಾಖೆ ಇವರು ದಿನಾಂಕ:30-06-2025 ಮತ್ತು 04-07-2025 ರಂದು ಸಭೆ ನಡೆಸಿ ಚರ್ಚಿಸಿದ ನಂತರ ದಿನಾಂಕ:10-07-2025 ರಿಂದಲೇ ಕೆಲಸಕ್ಕೆ ಹಾಜರಾಗಿರುತ್ತಾರೆ. ಸದರಿಯವರ ನ್ಯಾಯಯುತ ಬೇಡಿಕೆಗಳ ಕುರಿತು ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ:ಕಂಇ **157** ಎಸ್ ಎಸ್ ಸಿ **2025**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು